C.R.P.67

Form No.4 (Civil)
Deposition Sheets
(R.P.No.57)

**2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್.ಸಿ. ಸಂಖ್ಯೆ: 61/2024**

ಪ್ರಾಸಾ. 03 ಚಾಸಾ. 01

| | |
|---|---|
| ಸಾಕ್ಷಿದಾರರ ಹೆಸರು | ಬಾಲಕೃಷ್ಣ |
| ತಂದೆಯ ಹೆಸರು | ಕಾಳೇಗೌಡ |
| ವಯಸ್ಸು | 45 ವರ್ಷಗಳು |
| ಉದ್ಯೋಗ | ವಕೀಲರು |
| ವಾಸ | ಚಿಕ್ಕಬಳ್ಳಿ ಗ್ರಾಮ |

**ಸಾಕ್ಷಿಯನ್ನು ದಿನಾಂಕ:17.04.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ಚಾಸಾ-2 ನನ್ನ ತಂದೆ, ಚಾಸಾ-3 ರಿಂದ ಚಾಸಾ-5 ಗೊತ್ತು. ಚಾಸಾ-6 ನನ್ನ ತಂಗಿ. ನ್ಯಾಯಾಲಯದ ಮುಂದೆ ಇರುವ ಆರೋಪಿತರು ಗೊತ್ತು, ಸದರಿಯವರು ನನ್ನ ಸಂಬಂಧಿಕರು ಅಂದರೆ ಸಂಬಂಧದಲ್ಲಿ ಅಣ್ಣ ತಮ್ಮಂದಿರಾಗಬೇಕು.

2. ಸುಮಾರು ನಾಲ್ಕು ವರ್ಷಗಳ ಹಿಂದೆ ರಾತ್ರಿ 9.00 ಗಂಟೆ ಸಮಯದಲ್ಲಿ ನಾನು ನಮ್ಮ ಚಿಕ್ಕಬಳ್ಳಿ ಗ್ರಾಮದಲ್ಲಿರುವ ದಿನಸಿ ಅಂಗಡಿಗೆ ಹೋಗಿದ್ದೆ. ಆ ಸಮಯದಲ್ಲಿ ನ್ಯಾಯಾಲಯದಲ್ಲಿರುವ ಮೂರು ಜನ ಆರೋಪಿತರು 4ನೇ ಆರೋಪಿತನ ಜೊತೆ ಸೇರಿ ಏಕಾಏಕಿ ನನ್ನನ್ನು ಅಟ್ಟಿಸಿಕೊಂಡು ಬಂದರು. ಆಗ ನಾನು ನಮ್ಮ ಮನೆಯ ಬಳಿ ಇದೆ. ನಮ್ಮ ಮನೆ ಸದರಿ ಜಾಗದಿಂದ 100 ಮೀಟರ್ ಅಂತರದಲ್ಲಿದೆ. ಆಗ ಆರೋಪಿತರು ನನ್ನನ್ನು ಅಟ್ಟಿಸಿಕೊಂಡು ಬಂದು ದಾರಿಯಲ್ಲಿ ಹಲ್ಲೆ ಮಾಡಲು ಪ್ರಯತ್ನಿಸಿದರು. ಸದರಿ

ಆರೋಪಿತರು ಮಾರಕಾಸ್ತ್ರ ಆಯುಧಗಳನ್ನು ತಂದಿದ್ದರು. ಆಗ ನಾನು ಮನೆಯ ಒಳಗಡೆ ಹೇಗಿ ಬಾಗಿಲು ಹಾಕಿಕೊಂಡೆ. ಆಗ ನನ್ನ ತಂದೆ ಮತ್ತು ಅಕ್ಕಪಕ್ಕದವರಾದ ಚಾಸಾ-3 ಮತ್ತು ಚಾಸಾ-4 ರವರು ಬಂದು ಜಗಳ ಬಿಡಿಸಿ ಕಳುಹಿಸಿದರು.

3. ಸದರಿ ಘಟನೆ ಯಾವ ವಿಚಾರವಾಗಿ ನಡೆಯಿತು ಎಂದು ನನಗೆ ಗೊತ್ತಿಲ್ಲ. ಘಟನೆಯ ಸಂಬಂಧಪಟ್ಟಂತೆ ನಾನು 4 ಜನ ಆರೊಪಿತರ ವಿರುದ್ಧ ಸದರಿಯವರು ನನ್ನ ಮೇಲೆ ಮಾರಕಾಸ್ತ್ರ ಗಳಿಂದ ಹಲ್ಲೆ ಮಾಡಲು ಪ್ರಯತ್ನಿಸಿದರು ಎಂದು ದೂರು ನೀಡಿದ್ದೆ. ಸದರಿ ದೂರನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

4. ನಾನು ದೂರು ಕೊಟ್ಟ ನಂತರ ಪೊಲೀಸರು ಮಹಜರ್ ಮಾಡಲು 3-4 ದಿನಗಳ ನಂತರ ಸ್ಥಳಕ್ಕೆ ಬಂದಿದ್ದರು, ಆಗ ನಾನು ಹಾಜರಿದ್ದು, ನನ್ನ ತಂದೆಯೂ ಸಹ ಇದ್ದರು. 1ನೇ ಆರೋಪಿ ಹಲ್ಲೆ ಮಾಡಿದ ಸಂದರ್ಭದಲ್ಲಿ ನಮ್ಮ ಮನೆಯ ಕಿಟಕಿ ಗ್ಲಾಸಿಗೆ ಹೊಡೆದಿದ್ದನು. ಆ ಬಗ್ಗೆ ಪೊಲೀಸರು ಗ್ಲಾಸ್ ಪೀಸನ್ನು ಅಮಾನತುಪಡಿಸಿಕೊಂಡರು. ಅದಲ್ಲದೇ ಬೇರೆ ಯಾವ ವಸ್ತುಗಳನ್ನು ಅಮಾನತುಪಡಿಸಿಕೊಂಡರು ಎಂದು ನನಗೆ ನೆನಪಿಲ್ಲ. ಪೊಲೀಸರು ಮಧ್ಯಾಹ್ನ 12.00 ಗಂಟೆಗೆ ಮಹಜರ್ ಮಾಡಿರುತ್ತಾರೆ. ನಾನು ಸದರಿ ಮಹಜರಿಗೆ ಸಹಿ ಮಾಡಿರುತ್ತೇನೆ. ಸದರಿ ಮಹಜರನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

5. ಘಟನೆ ನಡೆದಿದ್ದ ಒಂದು ತಿಂಗಳ ನಂತರ ಪೊಲೀಸರು ನನ್ನನ್ನು ಪೊಲೀಸ್ ಠಾಣೆಗೆ ಕರೆಸಿದ್ದರು. ಆಗ ಪೊಲೀಸರು ನನಗೆ ಸಂಬಂಧಪಟ್ಟ ಸ್ಯಾಮ್ ಸಂಗ್ ಮೊಬೈಲನ್ನು ಅಮಾನತುಪಡಿಸಿಕೊಂಡಿದ್ದರು. ಯಾಕೆಂದರೆ ಆರೋಪಿ ನನ್ನ ಮೊಬೈಲಿಗೆ ಅವಾಚ್ಯ ಶಬ್ದಗಳಿಂದ ಮೆಸೇಜ್ ಕಳುಹಿಸಿದ್ದನು. ಆದರೆ ಯಾವ ಕಾರಣಕ್ಕೆ ಮೆಸೇಜ್ ಕಳುಹಿಸಿದ್ದ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಮಧ್ಯಾಹ್ನ ಸಮಯದಲ್ಲಿ ಸದರಿ ಮೊಬೈಲನ್ನು ಅಮಾನತುಪಡಿಸಿಕೊಂಡು ಮಹಜರ್ ಮಾಡಿರುತ್ತಾರೆ. ನಾನು ಸದರಿ ಮಹಜರಿಗೆ ಸಹಿ ಮಾಡಿರುತ್ತೇನೆ.

ಈ ಸಂದರ್ಭದಲ್ಲಿ ಮೊಬೈಲ್ ಹಾಗೂ ಅಮನಾತುಪಡಿಸಿಕೊಂಡ ವಸ್ತುಗಳನ್ನು ಹಾಜರುಪಡಿಸದ ಕಾರಣ ಮುಂದುವರೆದ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ.

2 ನೇ ಅಪರ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಮಂಡ್ಯ.